

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಅನಾಮಧೇಯ ಪತ್ರಗಳು

**ಸಾ**ರ್ವಜನಿಕ ಸ್ಥಾನಮಾನ ಉಳ್ಳವರಿಗೆ ಅನಾಮಧೇಯ ಪತ್ರಗಳು ಬರುವುದು ಸರ್ವೇಸಾಧಾರಣವಾದ ಸಂಗತಿ. ಒಂದು ದೊಡ್ಡ ಮಠದ ಸ್ವಾಮಿಗಳಾಗಿ ಮತ್ತು ನಾಡಿನ ಗ್ರಾಮೀಣ ಭಾಗದಲ್ಲಿ ನೂರಾರು ಶಾಲಾಕಾಲೇಜುಗಳನ್ನು ನಡೆಸುವ ದೊಡ್ಡ ಶಿಕ್ಷಣಸಂಸ್ಥೆಯ ಅಧ್ಯಕ್ಷರಾಗಿ ನಾವೇನೂ ಇದಕ್ಕೆ ಹೊರತಲ್ಲ. ಈ ಲೇಖನವನ್ನು ಬರೆಯುವಾಗಲೂ ಸಹ ಅಂಚೆಯಲ್ಲಿ ಒಂದು ಅನಾಮಧೇಯ ಪತ್ರ ಬಂದಿರುತ್ತದೆ. ಮೂರು ದಶಕಗಳಿಗೂ ಹೆಚ್ಚು ಕಾಲ ಸಾರ್ವಜನಿಕ ಜೀವನ ನಡೆಸಿದ ಮತ್ತು ನೂರಾರು ಶಾಲಾಕಾಲೇಜುಗಳ ಆಡಳಿತ ನಿರ್ವಹಣೆಯ ಸಿಹಿಕಹಿ ಅನುಭವವುಳ್ಳ ನಮಗೆ ಲಕೋಟೆಯನ್ನು ಒಡೆಯುತ್ತಿದ್ದಂತೆಯೇ ಇದು ಅನಾಮಧೇಯ ಪತ್ರವೆಂದು ಸುಲಭವಾಗಿ ಗುರುತಿಸುವಷ್ಟು ನಮ್ಮ ಕಣ್ಣುಗಳು ಪಳಗಿವೆ. ನಮ್ಮ ಗುರುವರ್ಯರಾದ ಶ್ರೀ ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳವರಿಗೂ ಅನೇಕ ಅನಾಮಧೇಯ ಪತ್ರಗಳು ಬರುತ್ತಿದ್ದವು. ಅವರದು ಮೇರುಸದೃಶ ವ್ಯಕ್ತಿತ್ವ. ಕಾಲಮಾನಕ್ಕೆ ಮೀರಿದ ವೈಚಾರಿಕ ನಿಲುವು. ತುಂಬಾ ಕ್ರಿಯಾಶೀಲರಾಗಿದ್ದ ಅವರನ್ನು ಮನಸಾರೆ ಆರಾಧಿಸುವ ಶಿಷ್ಯರೂ ಇದ್ದರು, ಅಷ್ಟೇ ಅವರನ್ನು ವಿರೋಧಿಸುವ ಕಡುವೈರಿಗಳೂ ಇದ್ದರು.

**ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ**
**ಲೋಕೋತ್ತರಾಣಾಂ ಚೇತಾಂಸಿ ಕೋಽನುವಿಜ್ಞಾತುಮರ್ಹತಿ**

**(ವಜ್ರಕ್ಕಿಂತಲೂ ಕಠಿಣ ಹೂವಿಗಿಂತಲೂ ಕೋಮಲ**
**ಅರಿಯಬಲ್ಲವರಾರೈ ಮಹಾನುಭಾವರ ಚೇತನವ)**

ಕಾಠಿಣ್ಯ ಮತ್ತು ಕೋಮಲತೆ ಪರಸ್ಪರ ವಿರುದ್ಧಗುಣಗಳಾಗಿದ್ದು ಒಂದೆಡೆ ಇರಲು ಸಾಧ್ಯವಿಲ್ಲ. ಆದರೂ ಸೋಜಿಗವೆಂದರೆ ಅವೆರಡೂ ಗುಣಗಳು ಮಹಾನುಭಾವರ ವ್ಯಕ್ತಿತ್ವದಲ್ಲಿ ಒಟ್ಟಿಗೆ ಇರುತ್ತವೆಯಂತೆ. ನಮ್ಮ ಗುರುವರ್ಯರನ್ನು ಕಣ್ಣಾರೆ ನೋಡಿದವರಿಗೆ ಮತ್ತು ಅವರ ಹತ್ತಿರದ ಒಡನಾಟವಿದ್ದವರಿಗೆ ಈ ಸುಭಾಷಿತದ ಅರ್ಥವನ್ನು ಹೆಚ್ಚು ವಿವರಿಸುವ ಅವಶ್ಯಕತೆಯೇ ಇಲ್ಲ. ಅಂತಹ ಅಪರೂಪದ ವ್ಯಕ್ತಿತ್ವ ಅವರದಾಗಿತ್ತು. ಅನೇಕ ಸಂದರ್ಭಗಳಲ್ಲಿ ಅವರು ತೆಗೆದುಕೊಳ್ಳುತ್ತಿದ್ದ ನಿರ್ಧಾರಗಳು ಕಠಿಣವಾಗಿರುತ್ತಿದ್ದವು. ಮರುಕ್ಷಣದಲ್ಲಿಯೇ ಆ ನಿರ್ಧಾರಗಳಿಂದ ಘಾಸಿಗೊಂಡಿದ್ದ ವ್ಯಕ್ತಿಯ ಬಗ್ಗೆ ಅಷ್ಟೇ ಅನುಕಂಪೆ ಇರುತ್ತಿತ್ತು. ಆದರೆ ತೆಗೆದುಕೊಂಡ ನಿರ್ಧಾರದಲ್ಲಿ ಮಾತ್ರ ಯಾವ ಬದಲಾವಣೆಯೂ ಇರುತ್ತಿರಲಿಲ್ಲ! ಧರ್ಮ, ರಾಜಕೀಯ, ಶಿಕ್ಷಣ, ಸಾಹಿತ್ಯ, ಸಂಗೀತ, ನಾಟಕ, ವ್ಯಾಪಾರ ಮತ್ತು ಕೃಷಿ ಹೀಗೆ ಜೀವನದ ಎಲ್ಲ ರಂಗಗಳಲ್ಲಿಯೂ ಅವರು ಶಿಷ್ಯರನ್ನು ಅವರವರ ಅಭಿರುಚಿ ಮತ್ತು ಕ್ಷಮತೆಗಳನ್ನು ಗುರುತಿಸಿ ಪ್ರೋತ್ಸಾಹಿಸಿ ಮುನ್ನಡೆಸಿದ ಅಸಾಧಾರಣ ವ್ಯಕ್ತಿತ್ವ ಉಳ್ಳವರಾಗಿದ್ದರು. ರಾಜಕೀಯ ವಲಯದಲ್ಲಿ 'ಸಿರಿಗೆರೆಯ ಸ್ವಾಮಿಗಳಿಗೆ ನೆಗಡಿಯಾದರೆ ವಿಧಾನಸೌಧ ಸೀನುತ್ತದೆ' ಎಂಬ ಗಾದೆಮಾತು ಅಂದಿನ ಮುಖ್ಯಮಂತ್ರಿ ದೇವರಾಜು ಅರಸು ಅವರ ಕಾಲದಲ್ಲಿ ಪ್ರಚಲಿತವಾಗಿತ್ತು. ಹೀಗಾಗಿ ಅವರ ನಂತರ ರಾಜಕೀಯವಾಗಿ ಎಷ್ಟೇ ತಟಸ್ಥನೀತಿಯನ್ನು ನಾವು ಅನುಸರಿಸಿದರೂ ಚುನಾವಣೆಗಳು ಬಂದಾಗ ಮಾಧ್ಯಮಗಳು ಮತ್ತು ಜನರು ನಮ್ಮ ಒಲವು/ನಿಲುವುಗಳ ಬಗ್ಗೆ ಆರೋಪಿಸುವುದನ್ನು ಬಿಡುತ್ತಿಲ್ಲ.

ನಮ್ಮ ಗುರುವರ್ಯರು ಸಾಮಾಜಿಕ ಅಸಮಾನತೆಯ ವಿರುದ್ಧ ಹೋರಾಡಿದ ವೀರಸಂನ್ಯಾಸಿಯಾಗಿದ್ದರು. ಹೀಗಾಗಿ ಲಕ್ಷಾಂತರ ಅಭಿಮಾನಿ ಶಿಷ್ಯರನ್ನು ಸಂಪಾದಿಸಿದಂತೆ ಅನೇಕ ಶತ್ರುಗಳನ್ನೂ ಕಟ್ಟಿಕೊಂಡಿದ್ದರು. ಅವರು ಭಕ್ತಿಸಂಪನ್ನ ಶಿಷ್ಯರಿಗೆ ಹೇಗೆ ಮಾತೃಹೃದಯಿಗಳಾಗಿದ್ದರೋ ಹಾಗೆಯೇ ತಮ್ಮ ಕಡುವೈರಿಗಳಿಗೆ ಸಿಂಹಸ್ವಪ್ನವಾಗಿದ್ದರು. ಒಮ್ಮೆ ಅಂಚೆಯಲ್ಲಿ ಅನಾಮಧೇಯ ವ್ಯಕ್ತಿಯೊಬ್ಬನಿಂದ ಬೆದರಿಕೆಯ ಪತ್ರ ಬಂದಿತ್ತು. ಅದರಲ್ಲಿ ಆ ವ್ಯಕ್ತಿ "ನಿನ್ನಂತಹ ಸ್ವಾಮಿ ನಮ್ಮ ಮಠಕ್ಕೆ ಸಿಕ್ಕಿದ್ದರೆ ನಿನ್ನನ್ನು ಒಂದು ಕೈ ನೋಡಿಕೊಳ್ಳುತ್ತಿದ್ದೆ" ಎಂದು ಹತಾಶನಾಗಿ ಬರೆದಿದ್ದನು. ಆಗತಾನೆ ಬೆನಾರಸ್ ಹಿಂದೂ ಯೂನಿವರ್ಸಿಟಿಯಿಂದ ಡಾಕ್ಟರೇಟ್ ಡಿಗ್ರಿಯನ್ನು ಪಡೆದುಕೊಂಡು ಸಿರಿಗೆರೆಗೆ ಬಂದಿದ್ದೆವು. ಪಕ್ಕದಲ್ಲಿ ನಿಂತಿದ್ದ ಶಿಷ್ಯರಿಗೆ ಆ ಅನಾಮಧೇಯ ಪತ್ರವನ್ನು ತೋರಿಸಿದ ಗುರುವರ್ಯರು "ಇಗೋ ನೋಡಿ! ನಾವು ಪಡೆದ ಡಿಗ್ರಿ ಸರ್ಟಿಫಿಕೇಟ್" ಎಂದು ಹೇಳಿ ಮುಗುಳ್ನಕ್ಕರು! ಅವರ ಜೀವನಾನುಭವದ ಮುಂದೆ ನಮ್ಮ ಯೂನಿವರ್ಸಿಟಿ ಡಿಗ್ರಿ ನತಮಸ್ತಕವಾಗಿತ್ತು. ಅವರ ತಿಳಿಹಾಸ್ಯದ ಮಾತುಗಳನ್ನು ಕೇಳಿ ಅವರ ಸಾರ್ವಜನಿಕ ಜೀವನದ ಸಾಹಸಗಾಥೆಯನ್ನು ಬಲ್ಲ ನಮಗೆ ಬಸವಣ್ಣನವರ ಮುಂದಿನ ವಚನ ನೆನಪಾಯಿತು: 'ವೀರನಾದರೆ ವೈರಿಯು ಮೆಚ್ಚಬೇಕು, ವೀರವ್ರತಿಯಾದರೆ ಅಂಗನೆಯರು ಮೆಚ್ಚಬೇಕು!'. ನಮ್ಮ ಗುರುವರ್ಯರಿಗೆ ಬಂದಿದ್ದ ಆ ಅನಾಮಧೇಯ ಬೆದರಿಕೆಯ ಪತ್ರ ಪರೋಕ್ಷವಾಗಿ ಅವರ ವೈರಿಯು ಬರೆದ ಮೆಚ್ಚುಗೆಯ ಪತ್ರವಾಗಿತ್ತು.

ಅನಾಮಧೇಯ ಪತ್ರಗಳು ಬಂದರೆ ಅಷ್ಟಾಗಿ ತಲೆಕೆಡಿಸಿಕೊಳ್ಳಬಾರದೆಂದು ಹಿರಿಯರು ಹೇಳುತ್ತಾರೆ. ಅದೇನೋ ಸರಿ. ಆದರೆ ಅವುಗಳನ್ನು ಉಪೇಕ್ಷಿಸಬೇಕೆಂದಾಗಲೀ ಹರಿದು ಕಸದ ಬುಟ್ಟಿಗೆ ಎಸೆಯಬೇಕೆಂದಾಗಲೀ ಹೇಳುವ ಕಿವಿಮಾತನ್ನು ಮಾತ್ರ ನಾವು ಸುತರಾಂ ಒಪ್ಪುವುದಿಲ್ಲ. ನಿಮಗೇನಾದರೂ ಅಂತಹ ಪತ್ರಗಳು ಬಂದರೆ ವ್ಯಗ್ರಗೊಳ್ಳದಿರಿ. ಸಿಟ್ಟಿನಿಂದ ಅವುಗಳನ್ನು ಹರಿದು ಕಸದ ಬುಟ್ಟಿಗೆ ಹಾಕದಿರಿ. ಅಂತೆಯೇ ಅನಾಮಧೇಯ ದೂರವಾಣಿ ಕರೆ ಬಂದಾಗ

ಆಕ್ರೋಶದಿಂದ ಫೋನು ಕುಕ್ಕಿ ಅಥವಾ ಟೇಬಲ್ ಗುದ್ದಿ ಬರೆಯುವ ಕೈಗೆ ನೋವುಂಟುಮಾಡಿಕೊಳ್ಳದಿರಿ. ಹಲ್ಲು ಕಡಿದು ನಿವೃತ್ತಿಯ ಮುಂಚೆಯೇ ಸವೆಸಿಕೊಳ್ಳದಿರಿ. ಸಮಾಧಾನಚಿತ್ತರಾಗಿದ್ದು ಆ ಪತ್ರಗಳೊಂದಿಗೆ ಬಂದ ಗುಂಡುಪಿನ್ನುಗಳನ್ನಾಗಲೀ, ಜೆಮ್ಸ್ ಕ್ಲಿಪ್‌ಗಳನ್ನಾಗಲೀ ಬಳಸಿಕೊಳ್ಳಲು ಮರೆಯದಿರಿ. ನಿಮಗೆ ತುರ್ತಾಗಿ ಬೇಕಾದ ಆ ಸ್ಟೇಷನರಿ ಸಾಮಗ್ರಿಗಳನ್ನು ನಿಮಗೆ ಆಗದವರು ಉಚಿತವಾಗಿ ಕಳುಹಿಸಿಕೊಡುತ್ತಿರುವಾಗ ಏಕಾದರೂ ನೀವು ಅವುಗಳನ್ನು ಹಾಳುಮಾಡಬೇಕು ಹೇಳಿ? ಅನಾಮಧೇಯ ವ್ಯಕ್ತಿ ತನ್ನ ವಿಷಪೂರಿತ ಲೇಖನಿಯಿಂದ ಬರೆದ ಕೆಟ್ಟ ಮಾತುಗಳು ನಿಮ್ಮನ್ನು ಚುಚ್ಚಿದಂತೆ ಜಡವಸ್ತುವಾದ ಆ ಗುಂಡುಪಿನ್ನೇನೂ ಚುಚ್ಚುವುದಿಲ್ಲವಲ್ಲ. ಅಂತಹ ಪತ್ರಗಳು ಬಂದಾಗ ನಾವು ಮಾಡುವಂತೆ ನೀವೂ ಮಾಡಿರಿ. ಮುಖ್ಯವಾದ ಪತ್ರಗಳನ್ನು ಫೈಲು ಮಾಡಿ ಒಪ್ಪ ಓರಣವಾಗಿ ಇಡುವಂತೆ ಅನಾಮಧೇಯ ಪತ್ರಗಳನ್ನೂ ಸಹ ಪ್ರತ್ಯೇಕ ಫೈಲು ಮಾಡಿ ಸುರಕ್ಷಿತವಾಗಿ ಇಡಿರಿ. ಅವುಗಳನ್ನು ಉಪೇಕ್ಷೆಮಾಡದೆ ಗಮನವಿಟ್ಟು ಓದಿ ಅವುಗಳಲ್ಲಿರುವ ವಿಚಾರಗಳನ್ನು ತಿಳಿದುಕೊಳ್ಳುವ ಪ್ರಯತ್ನ ಮಾಡಿರಿ.

ಅನಾಮಧೇಯ ಪತ್ರ ಬಂದಾಗ ಒಂದೆಡೆ ಅದನ್ನು ಬರೆದ ಅಪರಿಚಿತ ವ್ಯಕ್ತಿಯ ಬಗ್ಗೆ ಆಕ್ರೋಶ ಮತ್ತೊಂದೆಡೆ ಆ ವ್ಯಕ್ತಿ ಯಾರಿರಬಹುದೆಂದು ತಿಳಿದುಕೊಳ್ಳುವ ಕುತೂಹಲ ಎರಡೂ ಉಂಟಾಗುತ್ತವೆ. ಲಕೋಟೆಯ ಮೇಲಿರುವ ಅಂಚೆ ಇಲಾಖೆಯ ಮುದ್ರೆಯನ್ನು ಸರಿಯಾಗಿ ಗಮನಿಸಿದರೆ ಯಾವ ಸ್ಥಳದಿಂದ ಅದನ್ನು ಬರೆಯಲಾಗಿದೆಯೆಂಬುದರ ಅಂದಾಜು ಆಗುತ್ತದೆ. ಕೆಲವೊಮ್ಮೆ ಅನಾಮಧೇಯ ವ್ಯಕ್ತಿ ಎಲ್ಲೋ ಬರೆದು ಎಲ್ಲಿಂದಲೋ ಅಂಚೆಗೆ ಹಾಕಿರುವ ಸಾಧ್ಯತೆಯೂ ಇದೆ. ಪತ್ರದಲ್ಲಿರುವ ಕೈಬರಹವೂ ಬರೆದ ವ್ಯಕ್ತಿ ಯಾರಿರಬಹುದೆಂದು ಸುಳಿವು ನೀಡುತ್ತದೆ. ಕೆಲವೊಮ್ಮೆ ತನ್ನ ಕೈಬರಹ ಗೊತ್ತಾಗದಿರಲೆಂದು ಮುದುಕರು ಬರೆದಂತೆ, ಕೈನಡುಕವುಳ್ಳವರು ಬರೆದಂತೆ ಬೇಕೆಂದೇ ಅಕ್ಷರಗಳನ್ನು ಸೊಟ್ಟಾಗಿ ಬರೆದಿರುತ್ತಾರೆ. ಇನ್ನು ಗಣಕಯಂತ್ರದಲ್ಲಿ ಬರೆದಿದ್ದರೆ ಏನೂ ಗೊತ್ತಾಗುವುದಿಲ್ಲ. ಇದೇ ರೀತಿ ಅನಾಮಧೇಯ ಈ-ಮೇಲ್‌ಗಳೂ ಇತ್ತೀಚೆಗೆ ತಂತ್ರಜ್ಞಾನ ಬೆಳೆದಂತೆ ಹೊಸದಾಗಿ ಮೈದಾಳಿವೆ. ನಿಮ್ಮ ಈ-ಮೇಲ್‌ನ advance header ಪರಿಶೀಲಿಸಿದರೆ ಅದರಲ್ಲಿ IP Address ಸಿಗುತ್ತದೆ. ಅದನ್ನು ಅಂತರಜಾಲದಲ್ಲಿ ಹುಡುಕಿದರೆ ಆ ಈ-ಮೇಲ್ ಯಾವ ಸ್ಥಳದಿಂದ ಬಂದಿದೆಯೆಂದು ತಿಳಿಯುತ್ತದೆ. ಅನಾಮಧೇಯ ಪತ್ರದಲ್ಲಿ ಬಳಸಿರುವ ಭಾಷಾಶೈಲಿ, ಪದಪುಂಜ, ವಾಕ್ಯರಚನೆ, ವ್ಯಾಕರಣ ಇತ್ಯಾದಿಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ನಿಮಗೆ ಗೊತ್ತಿರುವ ಜನರ ಪೈಕಿ ಬರೆದಿರುವ ವ್ಯಕ್ತಿ ಯಾರಿರಬಹುದೆಂದು ಊಹಿಸಬಹುದಾಗಿದೆ. ಆದರೆ ತಪ್ಪಾಗಿ ಗ್ರಹಿಸಿ ಸಿಟ್ಟಿಗೆದ್ದು ಕೈಕೆಳಗಿನ ನೌಕರರನ್ನು ವಿನಾ ಕಾರಣ ಶಿಕ್ಷಿಸಬೇಡಿ ಅಥವಾ ಆತ್ಮೀಯರೊಂದಿಗಿರುವ ನಿಮ್ಮ ಸಂಬಂಧವನ್ನು ಕಡಿದುಕೊಳ್ಳಬೇಡಿ.

ಅನಾಮಧೇಯ ಪತ್ರ ಬರೆಯುವವರಿಗೆ ಯಾವುದೇ ಸಾಮಾಜಿಕ, ಸಾಂಸ್ಥಿಕ, ನೈತಿಕ ಭಯ ಇರುವುದಿಲ್ಲ. ಸ್ವಚ್ಛಂದವಾಗಿ, ಕಟುವಾಗಿ, ನಿರ್ಭಯವಾಗಿ ಬರೆಯುತ್ತಾರೆ. ಅವರಲ್ಲಿ ಕೆಲವರು ಧೀರ ಉಗ್ರಗಾಮಿಗಳೂ ಇರುತ್ತಾರೆ. 'ಧೀರ' ಏಕೆಂದರೆ ಅವರು ತಾವು ಮಾಡಲಿರುವ ಘೋರಕೃತ್ಯಗಳ ಬಗ್ಗೆ ನಿಮಗೆ ಮುಂಚಿತವಾಗಿಯೇ ಮುನ್ಸೂಚನೆಯನ್ನು ಕೊಡುತ್ತಾರೆ. ಉದಾಹರಣೆಗೆ ದಾವಣಗೆರೆಯ ಸಮೀಪದ ಒಂದು ಹಳ್ಳಿಯಲ್ಲಿ ಕಬ್ಬಿನ ಗದ್ದೆಗಳಿಗೆ ಯಾರೋ ಕಿಡಿಗೇಡಿಗಳು ಬೆಂಕಿ ಹಚ್ಚಿ ಅಪಾರ ಬೆಳೆ ನಷ್ಟ ಉಂಟುಮಾಡುತ್ತಿದ್ದರು. ಅವರು ಯಾರ ಕಬ್ಬಿನ ಗದ್ದೆಗೆ ಯಾವ ದಿನ ಬೆಂಕಿ ಹಚ್ಚಲಿದ್ದಾರೆಂದು ಮುಂಚಿತವಾಗಿಯೇ ಕಬ್ಬಿನ ಗದ್ದೆಯ ಮಾಲೀಕನಿಗೆ ಅನಾಮಧೇಯ ಪತ್ರ ಬರೆದು ತಿಳಿಸುತ್ತಿದ್ದರು. ಎಷ್ಟೇ ಮುನ್ನೆಚ್ಚರಿಕೆ ವಹಿಸಿದರೂ ಬೆಂಕಿ ಹಚ್ಚುವುದನ್ನು ತಡೆಗಟ್ಟಲು ಆಗುತ್ತಿರಲಿಲ್ಲ. ಆ ಕಿಡಿಗೇಡಿಗಳು ಯಾರೆಂದು ಪತ್ತೆ ಹಚ್ಚಲೂ ಆಗುತ್ತಿರಲಿಲ್ಲ. ಲಕ್ಷಾಂತರ ರೂ. ಬೆಲೆಯ ಕಬ್ಬಿನ ಬೆಳೆ ನಷ್ಟವಾಗುತ್ತಿತ್ತು. ಹಳ್ಳಿಯ ರೈತರೆಲ್ಲರೂ ಕಂಗಾಲಾಗಿದ್ದರು. ಒಬ್ಬನ ಮೇಲೆ ಅನುಮಾನ ಬಂದು ಗ್ರಾಮಸ್ಥರೆಲ್ಲಾ ಸೇರಿ ಅವನನ್ನು ಸೋಮವಾರದಂದು ನಮ್ಮ 'ಸದ್ಧರ್ಮ ನ್ಯಾಯಪೀಠ'ಕ್ಕೆ ಎಳೆದುತಂದರು. ಅವನು ನಿರಪರಾಧಿಯೆಂದು ಎಷ್ಟೇ ಹೇಳಿಕೊಂಡರೂ ಅವನ ಮುಖದಲ್ಲಿ ನಿರ್ದೋಷಿಯೆಂದು ಕಾಣಿಸುತ್ತಿರಲಿಲ್ಲ. ಆದರೆ ಅವನೇ ಅಪರಾಧಿಯೆಂದು ಸಾಬೀತುಪಡಿಸಲು ಗ್ರಾಮಸ್ಥರ ಹತ್ತಿರ ಯಾವುದೇ ಸಾಕ್ಷಿಪುರಾವೆಗಳು ಇದ್ದಿಲ್ಲ. ಆದಕಾರಣ ಆರೋಪಿಗೆ ಒಂದೆರಡು ತಿಂಗಳ ಕಾಲ ಬೇರೆ ಜಿಲ್ಲೆಯ ಅವನ ಬಂಧುಗಳ ಮನೆಯಲ್ಲಿರಲು ಆದೇಶಿಸಿದೆವು. ಪ್ರತಿದಿನ ಅಲ್ಲಿಯ ಪೋಲೀಸ್ ಠಾಣೆಗೆ ಹೋಗಿಬರಲು ತಾಕೀತು ಮಾಡಿದೆವು. ಅಲ್ಲಿಂದ ಮುಂದಕ್ಕೆ ಕಬ್ಬಿನ ಗದ್ದೆಗೆ ಬೆಂಕಿ ಬೀಳುವುದು ನಿಂತಿತು.

ವಿದೇಶೀಯ ಕೆಲವು ಕಂಪನಿಗಳಲ್ಲಿ ಯಾರಾದರೂ ನೌಕರರು ಅನಾಮಧೇಯ ಪತ್ರ ಬರೆದು ಸಿಕ್ಕಿಬಿದ್ದರೆ ಅವರನ್ನು ನೌಕರಿಯಿಂದ ವಜಾ ಮಾಡುವ ನಿಯಮಗಳಿವೆ. ಅಂತಹ ನಿಯಮ ತುಂಬ ಕಠಿಣವೇನೋ ಎನ್ನಿಸುತ್ತದೆ. ಕೆಲವೊಮ್ಮೆ ಅನಾಮಧೇಯ ಪತ್ರಗಳಿಂದ ನಿಮ್ಮ ಆಡಳಿತಕ್ಕೆ ಉಪಯುಕ್ತವಾದ ಮಾಹಿತಿ ದೊರಕುತ್ತದೆ. ಅದನ್ನು ಬಹಿರಂಗವಾಗಿ ಹೇಳಿ ನಿಷ್ಠುರಕ್ಕೆ ಒಳಗಾಗಲು ಯಾರೂ ಸಿದ್ಧರಿರುವುದಿಲ್ಲ. ಒಮ್ಮೆ ನಮ್ಮ ಶಾಲೆಯೊಂದರ ಗುಮಾಸ್ತನ ಮೇಲೆ ಅನಾಮಧೇಯ ಪತ್ರವೊಂದು ಬಂದಿತು. ತನಿಖೆ ಮಾಡಲಾಗಿ ಆ ಪತ್ರದಲ್ಲಿದ್ದ ಸಂಗತಿ ನಿಜವೆಂದು ತಿಳಿದುಬಂತು. ಆ ಗುಮಾಸ್ತ ಶಾಲೆಯ ನೌಕರರ ಜೀವವಿಮಾ ಕಂತನ್ನು ವೇತನದ ಬಿಲ್‌ನಲ್ಲಿ ಕಟಾವು ಮಾಡಿದರೂ ಆ ಹಣವನ್ನು ಎರಡು ವರ್ಷಗಳಿಂದ ಬ್ಯಾಂಕಿಗೆ ತುಂಬದೆ ಸ್ವಂತಕ್ಕೆ ಬಳಸಿಕೊಂಡಿದ್ದ. ಬ್ಯಾಂಕಿನಿಂದ ಡೂಪ್ಲಿಕೇಟ್ ಪಾಸ್‌ಪುಸ್ತಕವನ್ನು ಪಡೆದು ಅದರಲ್ಲಿ ತಾನೇ ಜಮಾ/ಖರ್ಚು ಬರೆದು ಬ್ಯಾಂಕ್ ಅಧಿಕಾರಿಗಳ ಸಹಿ ಮತ್ತು ಸೀಲನ್ನು ಫೋರ್ಜರಿ ಮಾಡಿದ್ದ!

ಅನಾಮಧೇಯ ಪತ್ರಗಳನ್ನು ಬರೆಯುವವರಲ್ಲಿ ಕೆಲವರು ಹೆಸರನ್ನು ನಮೂದಿಸಿರುತ್ತಾರೆ. ವಾಸ್ತವವಾಗಿ ಆ ಹೆಸರು ಅವರ ಸ್ವಂತ ಹೆಸರು ಆಗಿರದೆ ಕಪೋಲಕಲ್ಪಿತವಾಗಿರುತ್ತದೆ. ಅನಾಮಧೇಯ ಪತ್ರವೆಂದು ತಿಳಿದುಕೊಳ್ಳದಿರಲಿ ಎಂದು ನಿಮ್ಮನ್ನು ಮೋಸಗೊಳಿಸುವ ಉದ್ದೇಶದಿಂದ ಯಾವುದೋ ಹೆಸರಿನಲ್ಲಿ ಬರೆದಿರುತ್ತಾರೆ. ಅಂತಹ ಪತ್ರಗಳನ್ನು ಬರೆದವರು ಯಾರಿರಬಹುದು ಎಂದು ಪತ್ತೆ ಹಚ್ಚುವುದು ಅಷ್ಟು ಸುಲಭದ ಕಾರ್ಯವಲ್ಲ. ಯಾರು ಬರೆದಿದ್ದಾರೆಂದು ಪತ್ತೆ ಹಚ್ಚಲು ಹೋಗುವುದಕ್ಕಿಂದ ಏನು ಬರೆದಿದ್ದಾರೆಂದು ಚಿಂತಿಸುವುದು ಒಳ್ಳೆಯದು. ಅನಾಮಧೇಯ ಪತ್ರ ಬರೆಯುವವರೆಲ್ಲರೂ ನಿಮ್ಮ ಬಗ್ಗೆ ಕೆಟ್ಟ ಕೊಳಕ ಶಬ್ದಗಳನ್ನು ಬಳಸಿ ಬರೆಯುತ್ತಾರೆಂದೇನೂ ಇಲ್ಲ. ಅವರು ನಿಮ್ಮ ಶತ್ರುಗಳಾಗಿಯೂ ಇರಬೇಕಾಗಿಲ್ಲ. ಅವರು ತೊಂದರೆಗೆ ಸಿಲುಕಿಕೊಂಡ ನಿಮ್ಮ ನೌಕರರು ಆಗಿರಬಹುದು. ನಿಮ್ಮ ಆಡಳಿತ ವೈಖರಿ ಮತ್ತು ನಿರ್ಧಾರಗಳಿಂದ ಬೇಸತ್ತವರು ಇರಬಹುದು. ನಿಮ್ಮ ಸ್ನೇಹಿತರು, ಹಿತೈಷಿಗಳು ಅಥವಾ ನಿಮ್ಮ

ಬಗ್ಗೆ ಸಹಾನುಭೂತಿಯುಳ್ಳವರೂ ಇರಬಹುದು. ನಿಮ್ಮ ಸಾರ್ವಜನಿಕ ಹೇಳಿಕೆಗಳನ್ನು ಒಪ್ಪದ ಚಿಂತಕರು ಇರಬಹುದು. ಕೆಲವೊಮ್ಮೆ ನಿಮ್ಮ ಹತ್ತಿರ ಇರುವ, ನೀವು ಯಾರನ್ನು ಆಪ್ತರೆಂದು ತಿಳಿದುಕೊಂಡಿರುತ್ತೀರೋ ಅಂಥವರ ನಯವಂಚನೆಯ ಬಗ್ಗೆ ಕೆಲವೊಂದು ಉಪಯುಕ್ತ ಮಾಹಿತಿ ಒದಗಿಸಿ ನಿಮ್ಮನ್ನು ಎಚ್ಚರಿಸುವ ನಿಮ್ಮ ಹಿತಚಿಂತಕರೂ ಇರಬಹುದು. ಅಥವಾ ನಿಮ್ಮ ಮತ್ತು ನಿಮ್ಮ ಆಪ್ತರ ಮಧ್ಯೆ ಅಪನಂಬಿಕೆ ಮೂಡಿಸುವ ದುಷ್ಟ ಆಲೋಚನೆಯುಳ್ಳ ಧೂರ್ತರೂ ಇರಬಹುದು. ಆದರೆ ಕೆಲವು ವರ್ಷಗಳ ಹಿಂದೆ ನಮಗೆ ಬಂದಿದ್ದ ಅನಾಮಧೇಯ ಪತ್ರ ಇವೆಲ್ಲವುಗಳಿಗಿಂತಲೂ ಭಿನ್ನವಾಗಿದ್ದು ಅದು ಹೀಗಿದೆ:

## BLESSINGS OF LORD VENKATESHWARA

This letter brings you the blessings of Lord Venkateshwara for his devotees. This letter has gone around the world four times bringing luck and good fortune to the Lord's devotees. Please make twenty copies of this letter and send it as blessings of Lord Venkateshwara to twenty people you know within nine days of receiving this letter.

This is a chain of blessing going around the world. Please do not break this chain. Mr Navamani got Rs. five lakhs when he continued the chain. Mr Raman thought it was silly and put it away. Soon he lost his job and then when he sent out the blessings of Lord Venkateshwara and continued the chain he got back his job. Mr Selvanayakan died soon after he tore the letter and threw it into dustbin.

So please do not ignore this letter. Make twenty copies of this letter and send it to any twenty persons you know and within twenty five days something extraordinary and pleasant will happen to you also with the blessings of Lord Venkateshwara.

**- Devotee of Lord Venkateshwara**

ಇಂತಹ ಪತ್ರಗಳನ್ನು ಪತ್ರಸರಣಿ (Chain Letters) ಎಂದು ಕರೆಯುತ್ತಾರೆ. ಈ ಪತ್ರವು ನಮಗೆ ಎಲ್ಲಿಂದ ಬಂದಿರಬಹುದೆಂದು ನೀವು ಊಹಿಸಬಲ್ಲಿರಾ? ಈ ಪತ್ರ ನಿಮಗೆ ಬಂದಿದ್ದರೆ ಏನು ಮಾಡುತ್ತಿದ್ದಿರಿ? ಪತ್ರವನ್ನು ಓದಿ ನಕ್ಕು ಸುಮ್ಮನಿರುತ್ತಿದ್ದಿರಾ? ಕಳುಹಿಸಿದವರು ಯಾರಿರಬಹುದೆಂದು ಬೇಹುಗಾರಿಕೆಯನ್ನು ಮಾಡುತ್ತಿದ್ದಿರಾ? ತಕ್ಷಣವೇ ಇದರ 20 ಪ್ರತಿಗಳನ್ನು ಮಾಡಿ ನಿಮ್ಮ 20 ಜನ ಸ್ನೇಹಿತರಿಗೆ ಕಳುಹಿಸುತ್ತಿದ್ದಿರಾ? ಏತಕ್ಕಾಗಿ ಕಳುಹಿಸುತ್ತಿದ್ದಿರಿ? ನವಮಣಿಯಂತೆ 5 ಲಕ್ಷ ರೂ. ಗಳನ್ನು ಪಡೆಯುವ ಆಸೆಯಿಂದಲೋ? ರಾಮನ್‌ನಂತೆ ನೌಕರಿಯನ್ನು ಕಳೆದುಕೊಳ್ಳಬಾರದೆಂಬ ಭೀತಿಯಿಂದಲೋ? ಸೆಲ್ವನಾಯಕನಂತೆ ಸಾಯಬಾರದೆಂಬ ಭಯದಿಂದಲೋ? ಶ್ರೀವೆಂಕಟೇಶ್ವರಸ್ವಾಮಿಯ ಮೇಲಿನ ಭಕ್ತಿಯಿಂದಲೋ? ಪ್ರಾಮಾಣಿಕವಾಗಿ ಹೇಳಿ.

ಇದರ ನಿಗೂಢ ಉಗಮ ಹಾಗೂ ವಿಶ್ಲೇಷಣೆಗಾಗಿ ಮುಂದಿನ ವಾರದ ಅಂಕಣ ನೋಡಿ. ಅಲ್ಲಿಯವರೆಗೂ ಸಮಾಧಾನಚಿತ್ತದಿಂದಿರಿ. ಅಷ್ಟಕ್ಕೂ ಗಾಬರಿಯಾಗಲು ಇದು ನಿಮಗೆ ಬಂದ ಪತ್ರವೇನೂ ಅಲ್ಲವಲ್ಲ!

7.10.2009

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑